**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಪಾಟೀ ಸವಾಲುಃ- 1 ನೇ ಪ್ರತಿವಾದಿ ಪರ ಶ್ರೀ ಎಲ್.ಎಂ ವಕೀಲರಿಂದಃ</u>**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ದೇವರಹಳ್ಳಿಯಿಂದ ಚಿಕ್ಕಗೊಂಡನಹಳ್ಳಿಗೆ 40 ಕಿ.ಮೀ ದೂರವಿರುತ್ತದೆ. ನಾನು ದಾವಾ ಸ್ವತ್ತು ಗಳನ್ನು ನೋಡಿರುತ್ತೇನೆ. 1 ಮತ್ತು 2 ನೇ ದಾವಾ ಸ್ವತ್ತುಗಳನ್ನು ನೋಡಿರುತ್ತೇನೆ. ಸದರಿ ಜಮೀನುಗಳಲ್ಲಿ 1 ನೇ ವಾದಿ ವ್ಯವಸಾಯ ಮಾಡುತ್ತಿದ್ದರು ಈಗ 1 ನೇ ಪ್ರತಿವಾದಿ ಮಾಡುತ್ತಿದ್ದಾರೆ. 1 ನೇ ಪ್ರತಿವಾದಿಯವರು ಮೋಸದಿಂದ 2 ನೇ ಪ್ರತಿವಾದಿಯವರಿಂದ ದಾವಾ ಸ್ವತ್ತನ್ನು ಪಡೆದಿರುತ್ತಾರೆ. ಮರಣಶಾಸನ ಪತ್ರವನ್ನು ನಾನು ಓದಿರುವುದಿಲ್ಲ. ಊರಿನ ಜನರಿಂದ ನನಗೆ ಮರಣಶಾಸನ ಪತ್ರದ ಬಗ್ಗೆ ಗೊತ್ತಾಗಿರುತ್ತದೆ. ಮೂಕಮ್ಮ 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಮರಣಶಾಸನ ಪತ್ರವನ್ನು ಬರೆದಿದ್ದರು. ಮಹಂತಣ್ಣನ ಹೆಂಡತಿ ಮೂಕಮ್ಮ ಇರುತ್ತಾಳೆ. 1 ನೇ ಪ್ರತಿವಾದಿಯವರ ತಂದೆ ಹಾಗೂ ಮಹಂತಣ್ಣರವರ ತಂದೆ ಅಣ್ಣ ತಮ್ಮಂದಿರಾಗಿದ್ದರು.

2. ಮೂಕಮ್ಮನ ಜೀವಿತಕಾಲದಲ್ಲಿ ಆಕೆಯನ್ನು ಭೀಮಣ್ಣ ಹಾಗೂ ಮಹಂತಣ್ಣ ನೋಡಿಕೊಳ್ಳುತ್ತಿದ್ದರು. ಯಾವ ಸಂದರ್ಭದಲ್ಲಿ ಸದರಿ ಮರಣಶಾಸನ ಪತ್ರವನ್ನು ಬರೆಯಲಾಗಿದೆ ಎಂದು ಗೊತ್ತಿಲ್ಲ. ಸದರಿ ಮರಣಶಾಸನ ಪತ್ರ ನೊಂದಣಿಯಾಗಿರುವ ಬಗ್ಗೆ, ಬರೆದಿರುವವರ ಬಗ್ಗೆ ಹಾಗೂ ಸಾಕ್ಷಿದಾರರ ಬಗ್ಗೆ ನನಗೆ ಮಾಹಿತಿ ಇಲ್ಲ. 1 ನೇ ವಾದಿ ನನ್ನ ದೊಡ್ಡಪ್ಪನ ಮಗಳು ಇರುತ್ತಾಳೆ. 2 ರಿಂದ 4 ನೇ ವಾದಿಗಳು ಆಕೆಯ ಮಕ್ಕಳು ಇರುತ್ತಾರೆ. ನನ್ನ ದೊಡ್ಡಪ್ಪನ ಮಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಸ್ವತ್ತಿನಲ್ಲಿ ಮೊದಲು ಮೆಕ್ಕೆಜೋಳ ಹಾಗೂ ಹತ್ತಿ ಬೆಳೆ ಬೆಳೆಯುತ್ತಿದ್ದರು. ಪ್ರತೀ 6 ತಿಂಗಳಿಗೆ ದಾವಾ ಸ್ವತ್ತಿನಿಂದ 1 ಲಕ್ಷ ಆದಾಯ ಬರುತ್ತಿತ್ತು. ಖರ್ಚು ವೆಚ್ಚ ಸುಮಾರು 25 ಸಾವಿರ ಆಗುತ್ತಿತ್ತು. ಸದರಿ ಆದಾಯದ ಲೆಕ್ಕ ಪತ್ರವನ್ನು ನಾನು ನೋಡಿಕೊಳ್ಳುತ್ತಿದ್ದೆ. ದಾವಾ ಸ್ವತ್ತಿನಲ್ಲಿ ಬೆಳೆಯುತ್ತಿದ್ದ ಬೆಳೆಯ ಬಗ್ಗೆ ಹಾಗೂ ಆದಾಯದ ಬಗ್ಗೆ ನನಗೆ ಮಾಹಿತಿ ಇರದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು 1 ನೇ ಪ್ರತಿವಾದಿಯವರು ಬೇರೆಯವರ ಜೊತೆ ಮಾಡಿರುವ ಯಾವುದೇ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ಹಾಗೂ ವಾದಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮರಣಶಾಸನ ಪತ್ರದಂತೆ 1 ನೇ ಪ್ರತಿವಾದಿಯವರು ಸಂಪೂರ್ಣ ಹಕ್ಕು ಮಾಲೀಕತ್ವವನ್ನು ಹೊಂದಿರುತ್ತಾರೆ. ಎಂದರೆ ಸರಿಯಲ್ಲ. ಪ್ರತಿವಾದಿಗಳ ಅಕ್ರಮ ಸ್ವಾಧೀನದ ಬಗ್ಗೆ ನನಗೆ ಊರಿನ ಜನರಿಂದ ಗೊತ್ತಾಗಿರುತ್ತದೆ. 1 ನೇ ಪ್ರತಿವಾದಿಯವರು ಕಾನೂನುಬದ್ದ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸಾಕ್ಷಿದಾರನಾಗಿ ಸಾಕ್ಷಿ ನುಡಿಯುವ ಕೆಲಸವನ್ನು ಮಾಡುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ-** 3(ಎ) ಇಂದ (ಬಿ) ಪ್ರತಿವಾದಿ ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಯಿತು. ಗೈರು ಹಾಜರಿರುತ್ತಾರೆ. ಆದುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ